ಸಿರಿಗನ್ನಡಂ ಗೆಲ್ಗೆ

ಸಿರಿಗನ್ನಡಂ ಬಾಳ್ಗೆ

ಕರ್ನಾಟಕ ಸರ್ಕಾರ

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ,

ಶಾಲಾ ಶಿಕ್ಷಣ ಇಲಾಖೆ, ಭಟ್ಕಳ ಉತ್ತರ ಕನ್ನಡ ಜಿಲ್ಲೆ

# 8ನೇ ತರಗತಿ ಮೊದಲನೆ

# ಸಂಕಲನಾತ್ಮಕ ಮೌಲ್ಯಮಾಪನ ಸಪ್ಟಂಬರ್ 2025











ಗುಡ್ಡಪ್ಪ.ಎಂ.ಎಚ್ ಸಹ ಶಿಕ್ಷಕರು

ಕರ್ನಾಟಕ ಪಬ್ಲಿಕ್ ಸ್ಕೂಲ್ ತೆರ್ನಮಕ್ಕಿ

# 8ನೇ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

**ಹಂತ : 1. ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಉದ್ದಿಷ್ಟಗಳು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಜ್ಞಾನ / ಸ್ಮರಣೆ | 25 | 10 | 08 |
| 2 | ಗ್ರಹಿಕೆ | 35 | 14 | 09 |
| 3 | ಅಭಿವ್ಯಕ್ತಿ | 32.5 | 13 | 05 |
| 4 | ಪ್ರಶಂಸೆ | 7.5 | 03 | 01 |
| | **ಒಟ್ಟು** | **100** | **40** | **23** |

**ಹಂತ : 2. ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಪ್ರಶ್ನೆಯ ಸ್ವರೂಪ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ವಸ್ತುನಿಷ್ಠ | 12.5 | 05 | 05 |
| 2 | ಅತಿ ಕಿರು ಉತ್ತರ – 1 (ಒಂದು ಅಂಕದ ಪ್ರಶ್ನೆಗಳು) | 12.5 | 05 | 05 |
| 3 | ಕಿರು ಉತ್ತರ – 2 (ಎರಡು ಅಂಕಗಳ ಪ್ರಶ್ನೆಗಳು) | 50 | 20 | 10 |
| 4 | ದೀರ್ಘ ಉತ್ತರ – 1 (ಮೂರು ಅಂಕಗಳ ಪ್ರಶ್ನೆಗಳು) | 15 | 06 | 02 |
| 5 | ದೀರ್ಘ ಉತ್ತರ – 2 (ನಾಲ್ಕು ಅಂಕಗಳ ಪ್ರಶ್ನೆಗಳು) | 10 | 04 | 01 |
| | **ಒಟ್ಟು** | **100** | **40** | **23** |

**ಹಂತ : 3. ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಕ್ಲಿಷ್ಟತೆಯ ಮಟ್ಟ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಸುಲಭ | 37.5 | 15 | 11 |
| 2 | ಸಾಧಾರಣ | 50 | 20 | 10 |
| 3 | ಕಠಿಣ | 12.5 | 05 | 02 |
| | **ಒಟ್ಟು** | **100** | **40** | **23** |

**ಹಂತ : 4(ಎ). ಪಠ್ಯಾಂಶವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ವಿಷಯ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | **ಗದ್ಯ ಒಟ್ಟು** | 27.5 | 11 | 06 |
| 2 | **ಪದ್ಯ ಒಟ್ಟು** | 32.5 | 13 | 07 |
| 3 | **ಪಠ್ಯಪೋಷಕ ಅಧ್ಯಯನ** | 12.5 | 05 | 03 |
| 5 | **ವ್ಯಾಕರಣ, ವಾಕ್ಯ ರಚನೆ ಒಟ್ಟು** | 27.5 | 11 | 07 |
| | **ಸಮಗ್ರ ಒಟ್ಟು** | **100** | **40** | **23** |

ಹಂತ (ಬಿ) : ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.

## 1. ಗದ್ಯ ಭಾಗ

| ಕ್ರ.ಸಂ. | ಗದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಮಗ್ಗದ ಸಾಹೇಬ | 03 | 02 |
| 2 | ಸಾರ್ಥಕ ಬದುಕಿನ ಸಾಧಕ | 02 | 01 |
| 3 | ನೀರು ಕೊಡದ ನಾಡಿನಲ್ಲಿ | 03 | 01 |
| 4 | ಯಶೋಧರೆ | 03 | 02 |
| | ಗದ್ಯ ಒಟ್ಟು | 11 | 06 |

## 2. ಪದ್ಯ ಭಾಗ

| ಕ್ರ.ಸಂ | ಪದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಕನ್ನಡಿಗರ ತಾಯಿ | 04 | 02 |
| 2 | ಭಾರತೀಯತೆ | 03 | 02 |
| 3 | ಬೇವು ಬೆಲ್ಲದೊಳಿಡಲೇನು ಫಲ | 03 | 01 |
| 4 | ಸೋಮೇಶ್ವರ ಶತಕ | 03 | 02 |
| | ಪದ್ಯ ಒಟ್ಟು | 13 | 07 |

## 3. ಪಠ್ಯ ಪೋಷಕ ಅಧ್ಯಯನ

| ಕ್ರ.ಸಂ | ಪಠ್ಯಪೋಷಕ ಅಧ್ಯಯನ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಸಾರ್ಥಕ | 02 | 01 |
| 2 | ಆಹುತಿ | 01 | 01 |
| 3 | ಮಗಳಿಗೆ ಬರೆದ ಪತ್ರ | 02 | 01 |
| | ಪದ್ಯ ಒಟ್ಟು | 05 | 03 |

## 4. ವ್ಯಾಕರಣ, ವಾಕ್ಯ ರಚನೆ

| ಕ್ರ.ಸಂ. | ವಿಷಯ | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ವ್ಯಾಕರಣಾಂಶಗಳು | 05 | 05 |
| 9 | ಪತ್ರಲೇಖನ /ಪ್ರಬಂಧ ಲೇಖನ ಮತ್ತು ಗಾದೆ | 06 | 02 |
| | ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು | 11 | 07 |

## 8ನೆಯ ತರಗತಿ – ಅರ್ಧವಾರ್ಷಿಕ ಪರೀಕ್ಷೆ – ಪ್ರಥಮ ಭಾಷೆ ಕನ್ನಡ – ನೀಲ ನಕಾಶೆ.

| ಕ್ರ. ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | ಮಗ್ಗದ ಸಾಹೇಬ | ** | ** | ** | ** | ** | 1(1) | ** | ** | ** | 1(2) | ** | ** | ** | ** | ** | 1(1) | 1(2) | ** | ** | ** | 03 | 02 |
| 2 | ಸಾರ್ಥಕ ಬದುಕಿನ ಸಾಧಕ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 3 | ನೀರು ಕೊಡದ ನಾಡಿನಲ್ಲಿ | ** | ** | ** | ** | ** | ** | ** | ** | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| 4 | ಯಶೋಧರೆ | ** | 1(1) | ** | ** | ** | ** | 1(2) | ** | ** | ** | ** | ** | ** | ** | ** | 1(1) | 1(2) | ** | ** | ** | 03 | 02 |
| | **ಗದ್ಯ ಒಟ್ಟು** | ** | **1(1)** | ** | ** | ** | **1(1)** | **2(2)** | ** | ** | **1(2)** | **1(3)** | ** | ** | ** | ** | **2(1)** | **3(2)** | **1(3)** | ** | ** | **11** | **06** |
| 1 | ಕನ್ನಡಿಗರ ತಾಯಿ | ** | ** | 1(2) | ** | ** | ** | ** | ** | ** | 1(2) | ** | ** | ** | ** | ** | ** | 2(2) | ** | ** | ** | 04 | 02 |
| 2 | ಭಾರತೀಯತೆ | ** | ** | 1(2) | ** | ** | 1(1) | | ** | ** | | ** | ** | ** | ** | ** | 1(1) | 1(2) | ** | ** | ** | 03 | 02 |
| 3 | ಬೇವು ಬೆಲ್ಲದೊಳಲಿಡಲೇನು ಫಲ | ** | ** | ** | ** | ** | ** | ** | ** | ** | ** | ** | ** | ** | 1(3) | ** | ** | ** | 1(3) | ** | ** | 03 | 01 |
| 4 | ಸೋಮೇಶ್ವರ ಶತಕ | ** | 1(1) | ** | ** | ** | ** | 1(2) | ** | ** | ** | ** | ** | ** | ** | ** | 1(1) | 1(2) | ** | ** | ** | 03 | 02 |
| | **ಪದ್ಯ ಒಟ್ಟು** | ** | **4(1)** | **1(2)** | ** | ** | **1(1)** | **1(2)** | ** | ** | **1(2)** | ** | ** | ** | **1(3)** | ** | **2(1)** | **4(2)** | **1(3)** | ** | ** | **13** | **07** |
| 1 | ಸಾರ್ಥಕ | ** | ** | ** | ** | ** | | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 2 | ಆಹುತಿ | ** | ** | ** | ** | ** | **1(1)** | ** | ** | ** | ** | ** | ** | ** | ** | ** | **1(1)** | | ** | ** | ** | 01 | 01 |
| 3 | ಮಗಳಿಗೆ ಬರೆದ ಪತ್ರ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| | **ಪಠ್ಯಪೋಷಕ ಅಧ್ಯಯನ ಒಟ್ಟು** | ** | ** | ** | ** | ** | **1(1)** | **2(2)** | ** | ** | ** | ** | ** | ** | ** | ** | **1(1)** | **2(2)** | ** | ** | ** | **05** | **03** |

| ಕ್ರ ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ದೀ ಉ.1 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 4 | ವ್ಯಾಕರಣಾಂಶಗಳು | **5(1))** | ** | ** | ** | ** | ** | ** | ** | ** | ** | ** | ** | ** | ** | **5(1)** | ** | ** | ** | ** | ** | 05 | 05 |
| 5 | ಗಾದೆಮಾತು | ** | ** | ** | ** | ** | ** | ** | ** | ** | 1(2) | ** | ** | ** | ** | ** | ** | 1(2) | ** | ** | ** | 02 | 01 |
| 6 | ಪತ್ರ /ಪ್ರಬಂಧ ಲೇಖನ | ** | ** | ** | ** | ** | ** | ** | ** | ** | ** | ** | ** | 1(4) | ** | ** | ** | ** | ** | ** | 1(4) | 04 | 01 |
| | **ಒಟ್ಟು** | 5(1) | ** | ** | ** | ** | ** | ** | ** | ** | **1(2)** | ** | ** | **1(4)** | ** | 5(1) | ** | **1(2)** | ** | ** | **1(4)** | **11** | **07** |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

# 8ನೇ ತರಗತಿ ಸಂಕಲನಾತ್ಮಕ ಮೌಲ್ಯಮಾಪನ–1 2025

## 8TH STANDARD SUMMATIVE ASSESSMENT-1 2025

### ವಿಷಯ : ಪ್ರಥಮ ಭಾಷೆ–ಕನ್ನಡ

### Subject : First Language — KANNADA

**ದಿನಾಂಕ : /09/2025** **ವಿಷಯ ಸಂಕೇತ : 01K**

**ಸಮಯ : 1 ಗಂಟೆ 30 ನಿಮಿಷಗಳು** **ಗರಿಷ್ಠ ಅಂಕಗಳು : 40**

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **3*1=03**

1. ತಾಯಿಯಿಂದ ಗೌಪ್ಯವಾಗಿ ಹಳೆಕಾಲದ ಚಿನ್ನದ ಸರವನ್ನು ಅಲಂಕಾರಕ್ಕೆಂದು ಎರವಲು ತೆಗೆದುಕೊಂಡ.
   –ಈ ವಾಕ್ಯದಲ್ಲಿರುವ ವಿಜಾತಿ ಸಂಯುಕ್ತಾಕ್ಷರ ಪದ:
   (ಎ) ಗೌಪ್ಯವಾಗಿ (ಬಿ) ಚಿನ್ನದ
   (ಸಿ) ಸರವನ್ನು (ಡಿ) ಅಲಂಕಾರಕ್ಕೆಂದು
2. ಸುಬ್ರಹ್ಮಣ್ಯಮ್ ನಮ್ಮನ್ನು ವಿಶ್ವಾಸದಿಂದ ಸ್ವಾಗತಿಸಿದರು.–ಈ ವಾಕ್ಯವು
   (ಎ) ಸಾಮಾನ್ಯ ವಾಕ್ಯ (ಬಿ) ಅಪೂರ್ಣವಾಕ್ಯ
   (ಸಿ) ಸಂಯೋಜಿತ ವಾಕ್ಯ (ಡಿ) ಮಿಶ್ರವಾಕ್ಯ
3. 'ಡಿವಿಜಿ ಅವರು ಆಧುನಿಕ ಕನ್ನಡ ಸಾಹಿತ್ಯದ ದಿಗ್ಗಜರಲ್ಲಿ ಒಬ್ಬರು. ಈ ವಾಕ್ಯದಲ್ಲಿ 'ದಿಗ್ಗಜರಲ್ಲಿ' ಪದವು
   (ಎ) ಪ್ರಥಮ ವಿಭಕ್ತಿ (ಬಿ) ಚತುರ್ಥಿ ವಿಭಕ್ತಿ
   (ಸಿ) ಷಷ್ಠಿ ವಿಭಕ್ತಿ (ಡಿ) ಸಪ್ತಮಿ ವಿಭಕ್ತಿ

**II.ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **2*1=02**

4. ರಾಜ : ರಾಜರು : : ನೀನು : ________________
5. ನಿನ್ನಾಣ್ಮ : ಲೋಪಸಂಧಿ : : ಪತಿಯೊಡನೆ : ________________

**III. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **5*1=05**

6. ತಂದೆಯ ಆಸೆಯನ್ನು ಮೊದಲೆರಡು ಮಕ್ಕಳು ನೆರವೇರಿಸಿದ ಬಗೆ ಹೇಗೆ?
7. ತಂದೆಯನ್ನು ಕರೆತರಲು ಹೋಗುವೆನೆಂದು ಹೇಳಿದವರಾರು?
8. ಯಂತ್ರಘೋಷ ಏಳುತ್ತಿರುವ ಬಗೆ ಹೇಗೆ?
9. ಆಲದ ಮರದ ಬೀಜ ಸಿಡಿದು ಭೂಮಿಗೆ ಬಿದ್ದು ಏನಾಗುತ್ತದೆ?
10. ರೈಲಿನಲ್ಲಿ ಸಿಕ್ಕಿದ ಮುದುಕನ ಉದ್ಯೋಗವೇನು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **5*2=10**

11. ರಸೂಲ್‌ಖಾನ್ ಅವರು ಡಿವಿಜಿ ಅವರ ವಿದ್ಯಾಭ್ಯಾಸಕ್ಕಾಗಿ ಮಾಡಿದ ಸಹಾಯವೇನು?
12. ರಾಜನನ್ನು ಪೀಠದಲ್ಲಿ ಕುಳ್ಳಿರಿಸಿ ಯಶೋಧರೆ ಏನೆಂದು ವಿನಂತಿಸುತ್ತಾಳೆ?

13. ಸುವ್ರತಿ ಹಾಗೂ ಸುತನ ಬಗೆಗೆ ಕವಿ ಏನು ಹೇಳಿದ್ದಾನೆ?

14. ಬೂದಿಯನ್ನು ಕೊಳದಲ್ಲಿ ಬಿಡುವುದರಿಂದ ಬದುಕು ಧನ್ಯವಾಗುವುದು ಹೇಗೆ? –ವಿವರಿಸಿ.

15. ಬಾಪೂಜಿಯವರ ವ್ಯಕ್ತಿತ್ವದ ಬಗ್ಗೆ ನೆಹರೂರವರು ಏನು ಹೇಳಿದ್ದಾರೆ?

**V. ಕೆಳಗಿನ ಕವಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ: 1*2=02**

16. ಗೋವಿಂದ ಪೈ

**VI. ಕೆಳಗಿನ ಗಾದೆಗಳನ್ನು ವಿಸ್ತರಿಸಿ ಬರೆಯಿರಿ. 1*2=02**

17. ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ ***ಅಥವಾ*** ಆಚಾರವೇ ಸ್ವರ್ಗ; ಅನಾಚಾರವೇ ನರಕ

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 2*2=04**

18. "ದೇವರು ದೊಡ್ಡವನು ದೇವರು ದಯಾಳು"

19. "ನಿನ್ನ ಕಲ್ಲೇ ನುಡಿವುದಲ್ಲ"

**VI. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ. 1*2=02**

20. ನಾಡಿಗಾಗಿ ತನುವ ತೆತ್ತ ______________________

______________________

______________________

______________________ ನಡೆವ ಧೀರ ಪಯಣದಲ್ಲಿ

**VII. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾದರಿಸಿ, ಸಾರಾಂಶವನ್ನು ಬರೆಯಿರಿ. 1*3=3**

21. ಹೀನಕೃತ್ಯಗಳ ಮಾಡುತ ನದಿಯಲಿ

ಸ್ನಾನವ ಮಾಡಿದರೇನು ಫಲ

ಶ್ರೀನಿಧಿ ಪುರಂದರವಿಠಲನ ನೆನೆಯದೆ

ಮೌನವ ಮಾಡಿದರೇನು ಫಲ

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1*3=3**

22. ದುಡ್ಡಿಲ್ಲದೇ ಕುಡಿಯಬಲ್ಲ ನೀರು ಸಿಗುತ್ತಿದ್ದ ಕಾಲದ ಬಗ್ಗೆ ಲೇಖಕರ ಅಭಿಪ್ರಾಯವೇನು?

**ಅಥವಾ**

ಲೇಖಕಿಗೆ ಬೆಂಗಳೂರಿನಲ್ಲಿ 'ನೀರು ಕೊಡದ ಸಂಸ್ಕೃತಿಯ' ಬಗ್ಗೆ ಆದ ಅನುಭವವನ್ನು ಬರೆಯಿರಿ.

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಉತ್ತರ ಬರೆಯಿರಿ. 1*4=4**

23. ನಿಮ್ಮ ಶಾಲೆಯಲ್ಲಿ ಆಚರಿಸಿದ 'ಶಿಕ್ಷಕರ ದಿನಾಚರಣೆಯ' ಕುರಿತು ನಿಮ್ಮ ಗೆಳೆಯನಿಗೊಂದು ಪತ್ರ ಬರೆಯಿರಿ.

***ಅಥವಾ***

**ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹತ್ತು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧವನ್ನು ಬರೆಯಿರಿ.**

- ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ
- ಗ್ರಂಥಾಲಯದ ಮಹತ್ತ್ವ

# 8ನೇ ತರಗತಿ ಸಂಕಲನಾತ್ಮಕ ಮೌಲ್ಯಮಾಪನ–1 2025

## 8TH STANDARD SUMMATIVE ASSESSMENT-1 2025

## ವಿಷಯ : ಪ್ರಥಮ ಭಾಷೆ–ಕನ್ನಡ

## Subject : First Language — KANNADA

ದಿನಾಂಕ : /09/2025 ವಿಷಯ ಸಂಕೇತ : 01K

ಸಮಯ : 1 ಗಂಟೆ 30 ನಿಮಿಷಗಳು **ಮಾದರಿ ಉತ್ತರ ಸೂಚಿ** ಗರಿಷ್ಠ ಅಂಕಗಳು : 40

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **3*1=03**

1. ತಾಯಿಯಿಂದ ಗೌಪ್ಯವಾಗಿ ಹಳೆಕಾಲದ ಚಿನ್ನದ ಸರವನ್ನು ಅಲಂಕಾರಕ್ಕೆಂದು ಎರವಲು ತೆಗೆದುಕೊಂಡ. –ಈ ವಾಕ್ಯದಲ್ಲಿರುವ ವಿಜಾತಿ ಸಂಯುಕ್ತಾಕ್ಷರ ಪದ:

   (ಎ) **ಗೌಪ್ಯವಾಗಿ** (ಬಿ) ಚಿನ್ನದ

   (ಸಿ) ಸರವನ್ನು (ಡಿ) ಅಲಂಕಾರಕ್ಕೆಂದು

2. ಸುಬ್ರಹ್ಮಣ್ಯಮ್ ನಮ್ಮನ್ನು ವಿಶ್ವಾಸದಿಂದ ಸ್ವಾಗತಿಸಿದರು.–ಈ ವಾಕ್ಯವು

   (ಎ) ಸಂಯೋಜಿತ ವಾಕ್ಯ (ಬಿ) ಅಪೂರ್ಣವಾಕ್ಯ

   (ಸಿ) **ಸಾಮಾನ್ಯ ವಾಕ್ಯ** (ಡಿ) ಮಿಶ್ರವಾಕ್ಯ

3. 'ಡಿವಿಜಿ ಅವರು ಆಧುನಿಕ ಕನ್ನಡ ಸಾಹಿತ್ಯದ ದಿಗ್ಗಜರಲ್ಲಿ ಒಬ್ಬರು. ಈ ವಾಕ್ಯದಲ್ಲಿ 'ದಿಗ್ಗಜರಲ್ಲಿ' ಪದವು

   (ಎ) ಪ್ರಥಮ ವಿಭಕ್ತಿ (ಬಿ) ಚತುರ್ಥಿ ವಿಭಕ್ತಿ

   (ಸಿ) ಷಷ್ಠಿ ವಿಭಕ್ತಿ (ಡಿ) **ಸಪ್ತಮಿ ವಿಭಕ್ತಿ**

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **2*1=02**

4. ರಾಜ : ರಾಜರು : : ನೀನು : **ನೀವು**

5. ನಿನ್ನಾಣ್ಮ : ಲೋಪಸಂಧಿ : : ಪತಿಯೊಡನೆ : **ಆಗಮಸಂಧಿ**

---

**III. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **5*1=05**

6. **ತಂದೆಯ ಆಸೆಯನ್ನು ಮೊದಲೆರಡು ಮಕ್ಕಳು ನೆರವೇರಿಸಿದ ಬಗೆ ಹೇಗೆ?**

❖ ಒಬ್ಬ ಸರಕಾರಿ ಕಚೇರಿಯಲ್ಲಿ **ಗುಮಾಸ್ತನಾದ, ಇನ್ನೊಬ್ಬ ಪೋಸ್ಟ್ ಮಾಸ್ತರನಾದ**. ಹೀಗೆ ಮೊದಲೆರಡು ಮಕ್ಕಳು ತಂದೆಯ ಆಸೆಯನ್ನು ನೆರವೇರಿಸಿದರು.

7. **ತಂದೆಯನ್ನು ಕರೆತರಲು ಹೋಗುವೆನೆಂದು ಹೇಳಿದವರಾರು?**

8. **ಯಂತ್ರಘೋಷ ಏಳುತ್ತಿರುವ ಬಗೆ ಹೇಗೆ?**

❖ **ನೀಲಿಯಲ್ಲಿ ಹೊಗೆಯ ಚೆಲ್ಲುತ್ತ** ಯಂತ್ರಘೋಷ ಏಳುತ್ತಿವೆ.

9. **ಆಲದ ಮರದ ಬೀಜ ಸಿಡಿದು ಭೂಮಿಗೆ ಬಿದ್ದು ಏನಾಗುತ್ತದೆ?**

❖ **ಆಲದ ಮರದ** ಬೀಜ ಸಿಡಿದು ಭೂಮಿಗೆ ಬಿದ್ದು ಹೆಮ್ಮರವಾಗುತ್ತದೆ.

**10.** ರೈಲಿನಲ್ಲಿ ಸಿಕ್ಕಿದ ಮುದುಕನ ಉದ್ಯೋಗವೇನು?

❖ ರೈಲಿನಲ್ಲಿ ಸಿಕ್ಕಿದ ಮುದುಕ ರತ್ನದ ವ್ಯಾಪಾರಿಯಾಗಿದ್ದನು.

---

## IV. ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 5*2=10

**11.** ರಸೂಲ್‌ಖಾನ್ ಅವರು ಡಿವಿಜಿ ಅವರ ವಿದ್ಯಾಭ್ಯಾಸಕ್ಕಾಗಿ ಮಾಡಿದ ಸಹಾಯವೇನು?

❖ ರಸೂಲ್ ಖಾನನು ಡಿವಿಜಿಯವರನ್ನು ತನ್ನ ಜಟಕಾ ಬಂಡಿಯಲ್ಲಿ ಕೂರಿಸಿಕೊಂಡು ಬೌರಿಂಗ್ ಪೇಟೆಗೆ ಕರೆದುಕೊಂಡು ಹೋದನು. ಅಲ್ಲಿ ಬೆಂಗಳೂರಿಗೆ ಟಿಕೆಟ್ ಕೊಡಿಸಿ ರೈಲಿನಲ್ಲಿ ಕೂರಿಸಿದನು. ಕೈ ಕರ್ಚಿಗೆ ಒಂದು ರೂಪಾಯಿಯನ್ನು ಕೊಟ್ಟನು. ಹೀಗೆ ರಸೂಲ್ ಖಾನನು ಡಿವಿಜಿಯವರ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿದನು.

---

**12.** ರಾಜನನ್ನು ಪೀಠದಲ್ಲಿ ಕುಳ್ಳಿರಿಸಿ ಯಶೋಧರೆ ಏನೆಂದು ವಿನಂತಿಸುತ್ತಾಳೆ?

❖ ಸೋದರಿಯ ಸುತಳೆದಂದು ಎಳೆತನದಿಂದಲೇ ನನ್ನನ್ನು ಕರೆತಂದು ಸಾಕಿ ಸಲುಹಿ ಸೊಸೆಯಾಗಿ ಸ್ವೀಕರಿಸಿ ನನ್ನ ಬಾಳ್ವೆಯನ್ನುದ್ಧರಿಸಿದಿರಿ. ನಿಮ್ಮ ಅರಮನೆಯಲ್ಲಿ ನಾನು ಕನಸಿನಲ್ಲೂ ಎಣಿಸಲಾಗದ ಸುಖವನ್ನು ಅನುಭವಿಸಿದೆನು. ಪತಿಯನ್ನು ನನಗೆ ಇನ್ನೊಮ್ಮೆ ನೀಡಿ ರಕ್ಷಿಸಿರಿ. ನಾನು ನನ್ನ ಪತಿಯೆಡೆಗೆ ಹೋಗುವೆನು. ರಾಹುಲನನ್ನು ಇಲ್ಲಿಯೇ ಇರಿಸಿಕೊಳ್ಳಿರಿ. ನನಗೆ ಪತಿಯೆಡೆಗೆ ಹೋಗಲು ಅನುಮತಿ ಕೊಡಿ ಎಂದು ರಾಜನನ್ನು ಪೀಠದಲ್ಲಿ ಯಶೋದರೆಯು ವಿನಂತಿಸಿದಳು.

---

**13.** ಸುವ್ರತಿ ಹಾಗೂ ಸುತನ ಬಗೆಗೆ ಕವಿ ಏನು ಹೇಳಿದ್ದಾನೆ?

❖ ತಂದೆ, ತಾಯಿ, ಬಂಧು, ಗುರುಗಳ ಮಹತ್ವವನ್ನು ಕುರಿತು ಹೇಳುವಾಗ, ವೇದಗಳನ್ನು ಬಿಡದೇ ಪಠಿಸುವವನೇ ಸುವ್ರತಿ, ಒಳ್ಳೆಯ ವಿದ್ಯೆಯನ್ನು ಸಂಪಾದಿಸಿ ತಂದೆ -ತಾಯಿಗಳಿಗೆ ಸದ್ಗತಿಯನ್ನು ತೋರುವ ಒಳ್ಳೆಯ ಮಗನೇ ಸುತ ಎಂದು ಕವಿ ಹೇಳಿದ್ದಾರೆ.

---

**14.** ಬೂದಿಯನ್ನು ಕೊಳದಲ್ಲಿ ಬಿಡುವುದರಿಂದ ಬದುಕು ಧನ್ಯವಾಗುವುದು ಹೇಗೆ? -ವಿವರಿಸಿ.

❖ ಬೂದಿಯನ್ನು ಕೊಳದಲ್ಲಿ ಬಿಡುವುದರಿಂದ ಬೂದಿಯು ಕೆಸರಿನೊಂದಿಗೆ ಕೂಡಿ ಗೊಬ್ಬರವಾಗುತ್ತದೆ. ಕಮಲದ ಗಿಡವು ಚೆನ್ನಾಗಿ ಬೆಳೆದು ಹೆಚ್ಚು ಹೂಗಳನ್ನು ಬಿಟ್ಟಾಗ ಜೀವನದ ಹುಟ್ಟು ಸಾವಿನ ಬದುಕು ಧನ್ಯವಾಗುವುದೆಂದು ಕವಿ ಹೇಳಿದ್ದಾರೆ.

---

**15.** ಬಾಪೂಜಿಯವರ ವ್ಯಕ್ತಿತ್ವದ ಬಗ್ಗೆ ನೆಹರೂರವರು ಏನು ಹೇಳಿದ್ದಾರೆ?

❖ ಬಡವರಿಗೆ, ಕಷ್ಟದಿಂದ ನರಳುತ್ತಿರುವವರಿಗೆ, ಹಸುವಿನಿಂದ ಕೊರಗುತ್ತಿರುವವರಿಗೆ, ಅನ್ಯಾಯಕ್ಕೆ ತುತ್ತಾದವರಿಗೆ ಸದಾ ಸಹಾಯ ಮಾಡಬೇಕು ಎಂಬುದು ಗಾಂಧೀಜಿಯವರ ಆಸೆಯಾಗಿದೆ. ಹಾಗೂ ಅಂತವರ ಮೇಲೆ ಗಾಂಧೀಜಿಯವರಿಗೆ ಅಪಾರ ಪ್ರೇಮವಿದೆ. ಎಲ್ಲರಲ್ಲೂ ಸ್ಫೂರ್ತಿತುಂಬುವ ವ್ಯಕ್ತಿತ್ವ ಗಾಂಧೀಜಿಯವರದು.

---

## V. ಕೆಳಗಿನ ಕವಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ: 1*2=02

### 16. ಗೋವಿಂದ ಪೈ

❖ ರಾಷ್ಟ್ರಕವಿ ಎಂ. ಗೋವಿಂದ ಪೈ ಅವರು ಕಾಸರಗೋಡು ಜಿಲ್ಲೆಯ ಮಂಜೇಶ್ವರದಲ್ಲಿ 23.03.1883ರಲ್ಲಿ ಜನಿಸಿದರು. ಗಿಳಿವಿಂಡು, ನಂದಾದೀಪ, ಚಿತ್ರಭಾನು, ಹೆಬ್ಬೆರಳು, ಪಾರ್ಶ್ವನಾಥ ತೀರ್ಥಂಕರ ಚರಿತೆ, ಬಾಹುಬಲಿ ಗೊಮ್ಮಟೇಶ್ವರ ಚರಿತೆ, ಭಗವಾನ್ ಬುದ್ಧ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರು ಕನ್ನಡದ ಮೊದಲ ರಾಷ್ಟ್ರಕವಿ ಹೆಗ್ಗಳಿಕೆಗೆ ಪಾತ್ರರಾದವರು.

---

## VI. ಕೆಳಗಿನ ಗಾದೆಗಳನ್ನು ವಿಸ್ತರಿಸಿ ಬರೆಯಿರಿ. 1*2=02

### 17. ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ

❖ ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ತಾಯಿಗಿಂತ ಬಂಧುವಿಲ್ಲ; ಉಪ್ಪಿಗಿಂತ ರುಚಿಯಿಲ್ಲ ಎಂಬ ಗಾದೆಯೂ ಒಂದಾಗಿದೆ.

ನಮಗೆ ಅನೇಕ ಬಂಧುಗಳಿರಬಹುದು. ಅವರಾರೂ ತಾಯಿಯಂತೆ ನಮಗೆ ಅತ್ಯಂತ ಅತ್ಮೀಯರಾಗುವುದಿಲ್ಲ. ತಾಯಿ ನಿಜಕ್ಕೂ ಬಂಧುಗಳಿಗೆ ಮೀರಿದವಳು. ಅವಳು ದೇವರಿಗೆ ಸಮಾನಳಾದವಳು. ಹೀಗಾಗಿ ತಾಯಿಯನ್ನು ಬಿಟ್ಟರೆ ಮಕ್ಕಳಿಗೆ ಬೇರೆ ಬಂಧು ಬಳಗ ಇಲ್ಲವೆಂದು ಹೇಳಬಹುದು. ನಮ್ಮ ಬಾಲ್ಯದಿಂದ ನಮಗೆ ಹತ್ತಿರವಾಗಿ ನಮ್ಮ ನೋವು ನಲಿವುಗಳಿಗೆ ಸ್ಪಂದಿಸುತ್ತ ನಮಗಾಗಿ ತನ್ನ ಜೀವನದಲ್ಲಿ ಅನೇಕ ತ್ಯಾಗಗಳನ್ನು ಮಾಡುವ ತಾಯಿಯಂತ ಬಂಧು ಬೇರೊಬ್ಬರಿಲ್ಲ.

ಅದೇರೀತಿ ಎಲ್ಲಾ ರುಚಿಗಳಲ್ಲಿ ಉಪ್ಪಿನ ರುಚಿ ಶ್ರೇಷ್ಠವಾದುದು. ಷಡ್ರಸಗಳಲ್ಲಿ ಉಪ್ಪಿನ ಸ್ಥಾನ ಮೊದಲಿನದು. ಉಳಿದ ರುಚಿಗಳು ಬೇರೆಬೇರೆ ಸಂದರೌದಲ್ಲಿ ರುಚಿಕರವೆನಿದರು ಕೊನೆಗೆ ಉಪ್ಪಿನ ಸಹಯೋಗವಿಲ್ಲದೆ ಊಟ ಸಪ್ಪೆ ಎನಿಸುತ್ತದೆ. ಆದ್ದರಿಂದ ಉಪ್ಪು ರುಚಿಗಳಲ್ಲೇ ಉತ್ತಮವಾದುದ ಎಂದು ಈ ಗಾದೆ ಮಾತು ಸೂಚಿಸುತ್ತದೆ.

***ಅಥವಾ***

***–ಆಚಾರವೇ ಸ್ವರ್ಗ; ಅನಾಚಾರವೇ ನರಕ***

❖ ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ.ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ 'ಆಚಾರವೇ ಸ್ವರ್ಗ; ಅನಾಚಾರವೇ ನರಕ' ಎಂಬ ಗಾದೆಯೂ ಒಂದಾಗಿದೆ.

ಪುಣ್ಯ ಪಾಪಗಳು ನಮ್ಮ ವ್ಯಕ್ತಿತ್ವದಿಂದ ರೂಪಗೊಳ್ಳುತ್ತವೆಯೋ ಹೊರತು ಬೇರೆಲ್ಲೂ ಇರುವುದಿಲ್ಲ. ಅದ್ದರಿಂದಲೇ ಬಸವಣ್ಣನವರು ಸತ್ಯವೇ ನುಡಿವುದೇ ದೇವಲೋಕ, ಮಿತ್ಯವೇ ನುಡಿವುದೇ ಮರ್ತ್ಯಲೋಕ ಎಂದು ಹೇಳಿದ್ದು.ಅಯ್ಯಾ ಎಂದು ಒಳ್ಳೆಯ ಮಾತುಗಳನ್ನಾಡಿದರೆ ಸ್ವರ್ಗದಂತ ಸುಖ ಉಂಟಾಗುವುದು. . ಎಲವೋ ಎಂದು ಬಿರು ಮಾತನ್ನಾಡಿದರೆ ನರಕ ಸಮಾನವಾದ ಕಷ್ಟವೊದಗುವುದು. ಆದ್ದರಿಂದ ಮನುಷ್ಯರಾದ ನಾವು ನಮ್ಮ ಜೀವನದಲ್ಲಿ ಚಿಕ್ಕಂದಿನಿಂದಲೇ ಒಳ್ಳೆಯ ಆಚಾರ–ವಿಚಾರಗಳನ್ನು ಅಳವಡಿಸಿಕೊಂಡರೆ ಸಮಾಜದಲ್ಲಿ ನಮಗೆ ಉತ್ತಮವಾದ ಗೌರವ ಮಾನ್ಯಗಳು ದೊರಕುತ್ತದೆ. ಇದು ನಮಗೆ ಸುಖ ಮತ್ತು ನೆಮ್ಮದಿಯುತವಾದ ಜೀವನ ನಡೆಸಲು ಸಾಧ್ಯವಾಗುತ್ತದೆ. ಅದಕ್ಕೆ ವಿರುದ್ಧವಾಗಿ ನಾವು ಉತ್ತಮ ಆಚಾರ–ವಿಚಾರಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳದೇ ಇದ್ದರೆ ಸಮಜ ನಮ್ಮನ್ನು ದೂಷಿಸಲು ಪ್ರಾರಂಭಿಸುತ್ತದೆ ಆಗ ನಮ್ಮ ಜೀವನ ನರಕ ಸದೃಶ್ಯವಾದ ಕಷ್ಟಕ್ಕೆ ಸಿಲುಕುತ್ತದೆ. ಆದ್ದರಿಂದ ಉತ್ತಮ ಆಚಾರ–ವಿಚಾರಗಳನ್ನು ಅಳವಡಿಸಿಕೊಳ್ಳಬೇಕೆಂದು ಈ ಗಾದೆ ಸೂಚಿಸುತ್ತದೆ.

---

## V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 2*2=04

### 18. "ದೇವರು ದೊಡ್ಡವನು ದೇವರು ದಯಾಳು"

❖ **ಆಯ್ಕೆ :** ಈ ಮೇಲಿನ ವಾಕ್ಯವನ್ನು **'ಬಾಗಲೋಡಿ ದೇವರಾಯ'** ಅವರು ಬರೆದ **'ಸಮಗ್ರ ಕತೆಗಳು'** ಎಂಬ ಕಥಾ ಸಂಕಲನದಿಂದ ಆಯ್ದ **'ಮಗ್ಗದ ಸಾಹೇಬ'** ಗದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** 'ನಿಮ್ಮ ಮಗ ಕರೀಮನಿಗೆ ರಾಷ್ಟ್ರಪತಿ ಅವರು ಪದ್ಮಭೂಷಣ ಬಿರುದನ್ನು ಕೊಟ್ಟಿದ್ದಾರೆ'. ಆ ವಿಷಯ ಪತ್ರಿಕೆಯಲ್ಲಿ ಬಂದಿದೆ ಎಂದು ಶಂಕರಪ್ಪ ಅವರು ಮುದುಕನಾಗಿದ್ದ ರಹೀಮನಿಗೆ ಹೇಳಿದಾಗ ರಹೀಮನು ಸಂತೋಷದಿಂದ ಹೆಮ್ಮೆ ಪಡುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:** ತನ್ನ ಮಗ ಕರೀಮನ ಬಗ್ಗೆ ಕೆಟ್ಟ ಅಭಿಪ್ರಾಯ ಹೊಂದಿದ್ದ ರಹೀಮನಿಗೆ ತನ್ನ ಮಗನ ಸಾಧನೆಯನ್ನು ಕೇಳಿ ಅವನ ಬಗ್ಗೆ ಹೆಮ್ಮೆಯ ಭಾವನೆ ಮೂಡಿದ್ದು ಭಾವನೆ ಮೂಡಿದ್ದು, ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿದೆ.

---

19. **"ನಿನ್ನ ಕಲ್ಲೇ ನುಡಿವುದಲ್ಲ"**

❖ **ಆಯ್ಕೆ :** ಈ ವಾಕ್ಯವನ್ನು ಶ್ರೀ ಎನ್. ಎಸ್. ರಘುನಾಥ್ ಅವರು ಸಂಪಾದಿಸಿರುವ **'ಶತಮಾನದ ಮಕ್ಕಳ ಸಾಹಿತ್ಯ'** ಎಂಬ ಸಂಕಲನದಿಂದ ಆಯ್ದ ಶ್ರೀ **ಎಂ ಗೋವಿಂದ ಪೈ'** ಅವರು ರಚಿಸಿರುವ **'ಕನ್ನಡಿಗರ ತಾಯಿ'** ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಹಳೆಬೀಡು, ಬೇಲೂರು, ಶ್ರವಣಬೆಳಗೊಳ, ಕಾರ್ಕಳ ಹೀಗೆ ಕನ್ನಡ ನಾಡಿನ ಶಿಲ್ಪಕಲಾ ಸೌಂದರ್ಯದ ವೈಭವವನ್ನು, ಅದರ ಸೌಂದರ್ಯವನ್ನು ಕುರಿತು ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ.

**ಸ್ವಾರಸ್ಯ :** ನಮ್ಮ ಕನ್ನಡ ನಾಡಿನಲ್ಲಿ ಶಿಲ್ಪ ಕಲಾಕೃತಿಗಳು ಕನ್ನಡ ನಾಡಿನ ಭವ್ಯ ಇತಿಹಾಸದ ಹಿನ್ನೆಲೆಯ ಕತೆಯನ್ನು ಹೇಳುವುದು ಮೂಲಕ ಬಹು ಸ್ವಾರಸ್ಯ ಪೂರ್ಣವಾಗಿ ಮೂಡಿ ಬಂದಿದೆ.

---

## VI. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ. 1*2=02

20. ನಾಡಿಗಾಗಿ ತನುವ ತೆತ್ತ **ಹುತಾತ್ಮರ ಸ್ಮರಣೆಯಲ್ಲಿ**
**ನಮ್ಮ ಕಷ್ಟದಲ್ಲು ನೆರೆಗೆ ನೆರಳನೀವ ಕರುಣೆಯಲ್ಲಿ**
**ದಾರಿ ಬಳಸಿ ಏರುವಲ್ಲಿ ಬಿರುಗಾಳಿಯೆ ಮೊಳಗುವಲ್ಲಿ**
**ನಮ್ಮ ಗುರಿಯ ಬೆಳಕಿನೆಡೆಗೆ ನಡೆವ ಧೀರ** ಪಯಣದಲ್ಲಿ

---

## VII. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾದರಿಸಿ, ಸಾರಾಂಶವನ್ನು ಬರೆಯಿರಿ. 1*3=3

21. **ಹೀನಕೃತ್ಯಗಳ ಮಾಡುತ ನದಿಯಲಿ**
**ಸ್ನಾನವ ಮಾಡಿದರೇನು ಫಲ**
**ಶ್ರೀನಿಧಿ ಪುರಂದರವಿಠಲನ ನೆನೆಯದೆ**
**ಮೌನವ ಮಾಡಿದರೇನು ಫಲ**

❖ ಈ ಮೇಲಿನ ಪದ್ಯಭಾಗವನ್ನು **'ಪುರಂದರದಾಸರು'** ಬರೆದ **'ಬೇವು ಬೆಲ್ಲದೊಳಿಡಲೇನು ಫಲ'** ಎಂಬ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಹುಟ್ಟುಗುಣ ಸುಟ್ಟರೂ ಹೋಗುವುದಿಲ್ಲ. ಯಾವುದೇ ಕೆಲಸ ನಿರ್ವಹಿಸಿದರೂ ಅದರಿಂದ

ಫಲಾಫಲವನ್ನು ಅಪೇಕ್ಷಿಸಬಾರದು. ನಿರ್ಮಲ ಭಕ್ತಿ ಇಲ್ಲದಿದ್ದರೆ ಮಾಡಿದ ಕೆಲಸ ಕೂಡ ನಿಷ್ಫಲವಾಗುತ್ತದೆ ಎಂಬುದನ್ನು ಪುರಂದರದಾಸರು ಸರಳ ಇಲ್ಲಿ ನಿರೂಪಿಸಿದ್ದಾರೆ.

ಮಾನವ ತನ್ನ ಕೆಟ್ಟಗುಣಗಳನ್ನು ಬಿಡದೆ, ತನ್ನ ಪಾಪದ ಪ್ರಾಯಶ್ಚಿತ್ತಕ್ಕಾಗಿ ಪವಿತ್ರವಾದ ಗಂಗಾನದಿಯಲ್ಲಿ ಸ್ನಾನ ಮಾಡಿದರೂ ಅದರಿಂದ ಏನೂ ಪ್ರಯೋಜನವಿಲ್ಲ. ನಾವು ನಮ್ಮ ಇಷ್ಟ ದೇವರನ್ನು ಸದಾ ಮನದಲ್ಲಿ ನೆನೆಯದೆ, ಪ್ರಾರ್ಥಿಸದೆ, ಮೌನವ ಮಾಡಿದರೆ ಪ್ರಯೋಜನವೇನು ಎಂದು ಪುರಂದರದಾಸರು ಪ್ರಶ್ನಿಸಿದ್ದಾರೆ.

**ಮೌಲ್ಯ :** ಮನುಷ್ಯ ಮೊದಲು ತನ್ನ ಅಂತರಂಗವನ್ನು ಪರಿಶುದ್ಧವಾಗಿಟ್ಟುಕೊಳ್ಳಬೇಕು. ಹೀನ ಕೃತ್ಯಗಳನ್ನು ಮಾಡುವುದನ್ನು ಬಿಟ್ಟು ಪುರಂದರ ವಿಠಲನ ನೆನೆದರೆ ಅದರ ಫಲ ಸಿಗುತ್ತದೆ ಎಂಬ ಭಕ್ತಿಭಾವ ಇಲ್ಲಿ ನಿರೂಪಿತವಾಗಿದೆ.

---

## XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1*3=3

**22. ದುಡ್ಡಿಲ್ಲದೇ ಕುಡಿಯಬಲ್ಲ ನೀರು ಸಿಗುತ್ತಿದ್ದ ಕಾಲದ ಬಗ್ಗೆ ಲೇಖಕರ ಅಭಿಪ್ರಾಯವೇನು?**

❖ ನಮ್ಮ ನಾಡಿನಲ್ಲಿ ರೈಲು ನಿಲ್ದಾಣಗಳಲ್ಲಿ, ಬಸ್ಸು ನಿಲ್ದಾಣಗಳಲ್ಲಿ, ವಿಮಾನ ನಿಲ್ದಾಣಗಳಲ್ಲೂ 'ದುಡ್ಡಿಲ್ಲದೆ ಕುಡಿಯಬಲ್ಲ' ನೀರನ್ನು ಇರಿಸುತ್ತಿದ್ದರು. ಬಾಯಾರಿದಾಗ ಈಗಲೂ ಹೋಟೆಲು ಒಂದಕ್ಕೆ ಹೋಗಿ ನೀರು ಕುಡಿದು ಬರಬಹುದು. ಮನೆಯ ಹೊರಗೆ ಕಾಂಪೌಂಡ್ ಗೋಡೆಗೆ ಸಣ್ಣ ತೊಟ್ಟಿ ಕಟ್ಟಿ "ದನಕರಗಳು ನೀರು ಕುಡಿದುಹೋಗಲಿ" ಎಂದು ನೀರು ತುಂಬಿಡುತ್ತಿದ್ದರು. ಅಲ್ಲಲ್ಲಿ ಅಂಗಡಿಗಳಲ್ಲಿಯೂ ಸಹ ಮಣ್ಣಿನ ಮಡಿಕೆಯಲ್ಲಿ ನೀರು ತುಂಬಿಡುತ್ತಿದ್ದರು. ಅನೇಕ ಗುರುದ್ವಾರದ ಬಳಿ ಸ್ವಯಂ ಸೇವಕರು ನೀರಿನ ದೊಡ್ಡ ಕೊಳಾಯಿ ಹಿಡಿದು, ನಿಲ್ಲಿಸಿದ ಆಟೋ, ಬಸ್, ಹಾಗೂ ದಾರಿಹೋಕರಿಗೆಲ್ಲ ಉಚಿತವಾಗಿ ನೀರು ತುಂಬಿ ಕುಡಿಸುತ್ತಿದ್ದರು. ಇವೆಲ್ಲವನ್ನು ನಾವು ಕೇವಲ ಭಾರತದಲ್ಲಿ ಕಾಣುತ್ತೇವೆ. ಆದರೆ ವಿದೇಶಗಳಲ್ಲಿ ದುಡ್ಡು ಕೊಟ್ಟರೂ ಸಹ ನೀರು ಸಿಗುವುದಿಲ್ಲ.

**ಅಥವಾ**

**–ಲೇಖಕಿಗೆ ಬೆಂಗಳೂರಿನಲ್ಲಿ 'ನೀರು ಕೊಡದ ಸಂಸ್ಕೃತಿಯ' ಬಗ್ಗೆ ಆದ ಅನುಭವವನ್ನು ಬರೆಯಿರಿ.**

❖ ಲೇಖಕಿ ಮತ್ತು ಅವರ ಮಗಳು ಮಹಾತ್ಮಗಾಂಧಿ ರಸ್ತೆಯ 'ಬಾಂಬೆ ಬಜಾರ್' ಎದುರಿನ ಪುಟ್ಟ ಜಾಯಿಂಟ್ನಲ್ಲಿ ಹೋಗಿ ಕುಳಿತರು, ಇಲ್ಲಿ ನೀರು ತಂದಿಡಲಿಲ್ಲ. ಐಸ್ಕ್ರೀಂ ತಿಂದ ಇವರು 'ನೀರು ಬೇಕು'ಎಂದು ಕೇಳಿದರು. 'ಮಿನಿರಲ್ ವಾಟರ್?' ವೇಟರ್ ಪ್ರಶ್ನಿಸಿದನು. 'ಇಲ್ಲಪ್ಪ ಸಾಮಾನ್ಯ ನೀರು' ಎಂದರು. ಮಾಯವಾದ ವೇಟರ್ ಹದಿನೈದು ನಿಮಿಷ ಕಾದರೂ ಬರಲೇ ಇಲ್ಲ. ಕಾದು ಕಾದು ಸುಸ್ತಾಗಿ ಕೊನೆಗೆ ಕೌಂಟರಿಗೇ ಹೋಗಿ, ಬಿಲ್ಲು ಕೊಟ್ಟು ಹೊರಬಿದ್ದರು. ಅದೇ ವೇಟರ್, ಪುಟ್ಟ ಪುಟ್ಟ ಬಾಟಲಿಗಳಲ್ಲಿ ಮಿನರಲ್ವಾಟರುಗಳನ್ನು ಬೇರೆ ಬೇರೆ ಮೇಜಿಗೆ ಸರಬರಾಜು ಮಾಡುವುದು ಕಂಡಿತು. 'ಮಿನಿರಲ್ ವಾಟರ್?'ಎಂದಅವರು ಕೇಳುವ ಭಂಗಿ ಭಾವ ಹೇಗಿರುತ್ತದೆ ಎಂದರೆ ನಿಮಗೆ 'ಆರ್ಡಿನರಿ ವಾಟರ್' ಎಂದು ಹೇಳಲೂ ಹಿಂಜರಿಕೆಯಾಗಬೇಕು. ಮತ್ತೊಂದು ದಿನ ಮಾಲತಿಯೊಡನೆ ಇಂದಿರಾನಗರದ ಪುಟ್ಟ ಜಾಯಿಂಟ್ ಗೆ ಹೋಗಿ 'ಮಿಸಿಸಿಪಿ ಮಡ್ ಪೀ' ಆರ್ಡರ್ ಮಾಡಿದರು. ದೊಡ್ಡ ಬಿಳಿ ಪಿಂಗಾಣಿ ತಟ್ಟೆಯಲ್ಲಿ ಕೇಕ್ ಮತ್ತು ಐಸ್ಕ್ರೀಂ ಇರಿಸಿ, ಮೇಲೆ ಕೋಕೋ ಪುಡಿ ಉದುರಿಸಿ ಆಕರ್ಷಕವಾಗಿ ತಂದಿಟ್ಟರು. ಇಲ್ಲೂ ನೀರು ಕೊಟ್ಟಿರಲಿಲ್ಲ. 'ನೀರು ಕೊಡಿ' ಎಂದರು 'ಮಿನಿರಲ್ ವಾಟರ್?' ಎಂದಳು ಸರ್ವ್ ಮಾಡುತ್ತಿದ್ದ ಹುಡುಗಿ. 'ಇಲ್ಲ ಸಾಧಾರಣ ನೀರು' ಎಂದರೆ, ನಮ್ಮಲ್ಲಿ ಸಾಧಾರಣ ನೀರು ಇಲ್ಲ ಎಂದಳು. ಮತ್ತೇ ಲೇಖಕಿಯವರು 'ಬನ್ನಿ ಮಾಲತಿ ಸಾಗರ್ಗೆ, ಪಾನಿಪುರಿ ತಿನ್ನೋಣ' ಎಂದೆ. ಎದುರಿಗೊಂದು 'ಸಾಗರ್' ಹೋಟೆಲಿತ್ತು. ನುಗ್ಗಿದರು. ಕುಳಿತೊಡನೆ ವೇಟರ್ ಬಂದು ನಾಲ್ಕು ಲೋಟ ನೀರು ತಂದಿಟ್ಟ. ಬರೀ ಬಾಯಲ್ಲ ಮನಸೂ ತಂಪಾಯಿತು.

---

## XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಉತ್ತರ ಬರೆಯಿರಿ. 1*4=4

**23. ನಿಮ್ಮ ಶಾಲೆಯಲ್ಲಿ ಆಚರಿಸಿದ 'ಶಿಕ್ಷಕರ ದಿನಾಚರಣೆಯ' ಕುರಿತು ನಿಮ್ಮ ಗೆಳೆಯನಿಗೊಂದು ಪತ್ರ ಬರೆಯಿರಿ.**

**ಕ್ಷೇಮ,** **ಇವರಿಂದ,**

ಸಾತ್ವಿಕ್
8ನೇ ತರಗತಿ
ಕರ್ನಾಟಕ ಪಬ್ಲಿಕ್ ಸ್ಕೂಲ್ ತೆರ್ನಮಕ್ಕಿ
12ನೇ ಸೆಪ್ಟಂಬರ್, 2025

**ಪ್ರೀತಿಯ ಗೆಳೆಯ ಮನ್ವಿತನಿಗೆ,**

ನಿನ್ನ ಪ್ರೀತಿಯ ಗೆಳೆಯನಾದ ಸಾತ್ವಿಕ್ ಮಾಡುವ ಶುಭಪ್ರಣಾಮಗಳು. ಇಲ್ಲಿ ನಾನು ಆರೋಗ್ಯದಿಂದ ಇದ್ದೇನೆ. ನೀವು ಸಹ ಆರೋಗ್ಯವಾಗಿ ಇರುವಿರೆಂದು ಭಾವಿಸಿಕೊಂಡಿದ್ದೇನೆ. ಹಾಗೆಯೇ ಇಲ್ಲಿ ನನ್ನ ವಿದ್ಯಾಭ್ಯಾಸವೂ ಚೆನ್ನಾಗಿ ನಡೆಯುತ್ತಿದೆ.

ಈ ಪತ್ರವನ್ನು ಬರೆಯಲು ಕಾರಣವೇನೆಂದರೆ ನಮ್ಮ ಶಾಲೆಯಲ್ಲಿ 'ರಾಷ್ಟ್ರೀಯ ಶಿಕ್ಷಕರ ದಿನಾಚರಣೆ'ಯ ಅಂಗವಾಗಿ ದಿನಾಂಕ : 05/05/2025ರಂದು ಶಿಕ್ಷಕರ ದಿನಾಚರಣೆಯನ್ನು ಏರ್ಪಡಿಸಲಾಗಿತ್ತು. ನಮ್ಮ ಶಾಲೆಯ ಶಾಲಾ ಸಂಸತ್‌ನ ಪ್ರತಿನಿಧಿಗಳ ನೇತೃತ್ವದಲ್ಲಿ ನಮ್ಮ ಶಾಲೆಯ ಎಲ್ಲ ಶಿಕ್ಷಕರಿಗೂ ಕೆಲವೊಂದು ಆಟಗಳನ್ನು ಆಡಿಸಿದೆವು. ಎಲ್ಲಾ ಶಿಕ್ಷಕರು ಬಹಳ ಸಡಗರ ಸಂಭ್ರಮದಿಂದ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅಷ್ಟೇ ಅಲ್ಲದೇ ಹಲವು ವಿದ್ಯಾರ್ಥಿಗಳು ಶಿಕ್ಷಕರ ಕುರಿತು ಅತ್ಯುತ್ತಮವಾದ ಅಭಿಪ್ರಾಯಗಳನ್ನು ಹಂಚಿಕೊಂಡರು. ಹಾಗೆಯೇ ಶಿಕ್ಷಕರು ಸಹ ವಿದ್ಯಾರ್ಥಿ ಜೀವನಕ್ಕೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು. ಹೀಗೆ ಕಾರ್ಯಕ್ರಮ ಯಶಸ್ವಿಯಾಗಿ ಸಂಪನ್ನಗೊಂಡಿತು.

ಮತ್ತಷ್ಟು ವಿಷಯಗಳನ್ನು ರಜೆಗೆ ಊರಿಗೆ ಬಂದಾಗ ಮಾತನಾಡೋಣ.

**ಶುಭಪ್ರಣಾಮಗಳೊಂದಿಗೆ,** **ಇತಿ ಪ್ರೀತಿಯ ಗೆಳೆಯ**

***ಸಾತ್ವಿಕ್***

**ಇವರಿಗೆ,**
ಮನ್ವಿತ್
8ನೇ ತರಗತಿ
ಸರಕಾರಿ ಪ್ರೌಢಶಾಲೆ ಹೊನ್ನಾವರ –581421

***ಅಥವಾ***

**ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹತ್ತು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧವನ್ನು ಬರೆಯಿರಿ.**

- **ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ :–**

**ಪೀಠಿಕೆ :**

ಪ್ರಕೃತಿಗೂ ಮಾನವನಿಗೂ ಗಾಢ ಸಂಬಂಧವಿದೆ. ಅವನು ಪ್ರಕೃತಿಯಲ್ಲೇ ಹುಟ್ಟಿ, ಪ್ರಕೃತಿಯಲ್ಲೇ ಬದುಕಿ ಬಾಳುತ್ತಾನೆ. ತನಗೆ ಬೇಕಾದ ಎಲ್ಲವನ್ನೂ ಪ್ರಕೃತಿಯಿಂದಲೇ ಪಡೆಯುತ್ತಾನೆ. ಆದ್ದರಿಂದಲೇ ಪ್ರಕೃತಿಯನ್ನು 'ಪ್ರಕೃತಿ ಮಾತೆ', ಎಂದು ಕರೆಯುತ್ತಾರೆ. ಆದರೆ ಮಹಾಸ್ವಾರ್ಥಿಯಾದ ಮನುಷ್ಯನಿಂದ ಇಂದು ಗ್ರಾಮ–ನಗರ ಸೇರಿದಂತೆ ಸಂಪೂರ್ಣ ಪರಿಸರ ಮಲಿನವಗಿ, ಮನುಷ್ಯನ ನಾಶ ಸನ್ನಿಹಿತವಾಗಿದೆ. ಆದ್ದರಿಂದ ಪರಿಸರ ಸಂರಕ್ಷಣೆಯನ್ನು ಮಾಡುವಲ್ಲಿ ಭವಿತವ್ಯದ ನಾರಿಕರಾದ ವಿದ್ಯಾರ್ಥಿಗಳ ಪಾತ್ರ ಅತ್ಯಂತ ಮಹತ್ವದ್ದು ಎಂದು ಹೇಳಬಹುದು.

**ವಿಷಯ ನಿರೂಪಣೆ :**

ವಿದ್ಯಾರ್ಥಿಗಳು ತಮ್ಮ ಶಾಲೆ, ಮನೆ ಸೇರಿದಂತೆ ಸುತ್ತಲಿನ ಪರಿಸರವು ಮಲಿನವಾಗದಂತೆ ಸ್ವಚ್ಛವಾಗಿಟ್ಟುಕೊಳ್ಳಬೇಕು. ವಿದ್ಯಾರ್ಥಿಗಳು ಶಿಕ್ಷಕರು, ಪೋಷಕರು ಮತ್ತು ಸಮುದಾಯದ ಸಹಾಯ ಪಡೆದು ವಿದ್ಯಾರ್ಥಿ ಸಂಘಗಳ ಮೂಲಕ ಜಾಥಾ ಹೋಗಿ ಜನರಲ್ಲಿ ಪರಿಸರ ಸಂರಕ್ಷಣೆಯ ಅರಿವನ್ನು ಮೂಡಿಸಬೇಕು. ತಮ್ಮ ಶಾಲಾ

ಆವರಣದಲ್ಲಿ ಮಾಲಿನ್ಯ ಉಂಟುಮಾಡುವ ಪ್ಲಾಸ್ಟಿಕ್, ಮಲೀನ ನೀರು ಇತ್ಯಾದಿಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಬೇಕು. ವಿದ್ಯಾರ್ಥಿಗಳು ಸ್ವತ: ತಾವೇ ಶಾಲೆಗಳಲ್ಲಿ ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ **ಪ್ರಬಂಧ, ಭಾಷಣ, ಚಿತ್ರಕಲಾ ಸ್ಪರ್ಧೆಗಳನ್ನು** ಏರ್ಪಡಿಸುವ ಮೂಲಕ ಪರಿಸರ ಸಂರಕ್ಷಣೆಯ ಅರಿವು ಮೂಡಿಸಬೇಕು. ವಿದ್ಯಾರ್ಥಿಗಳು **ಪರಿಸರ ದಿನಾಚರಣೆಯಂದು** ತಮ್ಮ ಮನೆ ಗ್ರಾಮ, ಮತ್ತು ಶಾಲೆಗಳಲ್ಲಿ ಗಿಡಗಳನ್ನು ನೆಟ್ಟು ಪೋಷಿಸಬೇಕು. ವಿದ್ಯಾರ್ಥಿಗಳು ತಮ್ಮ ಊರಿನ ರೈತರಿಗೆ ಬೆಳೆಗಳಿಗೆ ರಾಸಾಯನಿಕ ಗೊಬ್ಬರದ ಬದಲಾಗಿ **ಸಾವಯವ ಗೊಬ್ಬರ ಬಳಸುವಂತೆ** ತಿಳಿ ಹೇಳಬೇಕು. ವಿದ್ಯಾರ್ಥಿಗಳು ತಮ್ಮ ಗುಂಪಿನ ಮೂಲಕ ಮಾರುಕಟ್ಟೆ ಪ್ರದೇಶಗಳಿಗೆ ಹೋಗಿ ಅಲ್ಲಿನ ವ್ಯಾಪಾರಿಗಳಿಗೆ ಆಹಾರ ಬೆಳೆಗಳು, ಹಣ್ಣು-ತರಕಾರಿಗಳಿಗೆ ರಾಸಾಯನಿಕಗಳನ್ನು ಸಿಂಪಡಿಸದಂತೆ ತಿಳಿಹೇಳಬೇಕು. ವಿದ್ಯಾರ್ಥಿಗಳು ತಮ್ಮ ಹತ್ತಿರದ ಪ್ರದೇಶಗಳಲ್ಲಿರುವ ನದಿ,ನಾಲೆ, ಕೆರೆ, ಬಾವಿಗಳ ಹತ್ತಿರ ನೈರ್ಮಲ್ಯ ಕಾಪಾಡುವ ಸಂದೇಶವನ್ನೊಳಗೊಂಡ **ಭಿತ್ತಿಪತ್ರವನ್ನು ಅಂಟಿಸುವ** ಮೂಲಕ ಆ ಪ್ರದೇಶಗಳಲ್ಲಿನ ಮಾಲಿನ್ಯವನ್ನು ನಿಯಂತ್ರಿಸುವಂತೆ ಜನರಲ್ಲಿ ಅರಿವನ್ನು ಮೂಡಿಸಬೇಕು. ಅಲ್ಲದೇ ಬೀದಿನಾಟಕಗಳ ಮೂಲಕವು ಸಹ ವಿದ್ಯಾರ್ಥಿಗಳು ಜನರಲ್ಲಿ ಪರಿಸರ ಸಂರಕ್ಷಣೆಯ ಜಾಗೃತಿಯನ್ನು ಮೂಡಿಸಬಹುದು.



**ಉಪಸಂಹಾರ :**

ಪರಿಸರವೇ ಸೃಷ್ಟಿಯ ಪ್ರತಿಯೊಂದು ಜೀವಿಯ ಆಗರ. ಆದ್ದರಿಂದ ಪರಿಸರವನ್ನು ನಾವು ಉಳಿಸಿ ಬೆಳೆಸಿಕೊಂಡು ಹೋಗಬೇಕಾದರೆ, ನಾಶವಾಗುತ್ತಿರುವ ಪರಿಸರವನ್ನು ಸಂರಕ್ಷಿಸುವ ಅರಿವನ್ನು ವಿದ್ಯಾರ್ಥಿಗಳಷ್ಟೇ ಅಲ್ಲದೆ ಪ್ರತಿಯೊಬ್ಬ ನಾಗರಿಕನೂ ಮಾಡಬೇಕಾದುದೂ ಆದ್ಯ ಕರ್ತವ್ಯವಾಗಿದೆ.

"ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ"

**ಮಾಡೋಣ ಮಾಡೋಣ**
**ಪರಿಸರವನ್ನು ಸ್ವಚ್ಛ ಮಾಡೋಣ**
**ಹೆಕ್ಕೋಣ ಹೆಕ್ಕೋಣ ಬಿದ್ದ ಕಸವನ್ನು ಹೆಕ್ಕೋಣ**
**ಬಿಡದೆ ಕಸವನ್ನು ತೊಟ್ಟಿಗೆ ಹಾಕಿ**
**ಕಸವಾಗುವುದನ್ನು ನಿಲ್ಲಿಸೋಣ**

***ಅಥವಾ***

- *ಗ್ರಂಥಾಲಯದ ಮಹತ್ವ*

**ಪೀಠಿಕೆ :-**

ಪುಸ್ತಕಗಳು ಜ್ಞಾನ ಭಂಡಾರಗಳು, ಭಾಷೆ ವಾಕ್ಷುಷ ರೂಪ ಸಿಕ್ಕಾಗಿನಿಂದ ಮಾನವನ ಅನುಭವಾಮೃತಗಳು ದಾಖಲಿಸಲ್ಪಟ್ಟು ಈಗ ಗ್ರಂಥ ರೂಪದಲ್ಲಿ ಸಂರಕ್ಷಿಸಲ್ಪಟ್ಟಿವೆ. ಪುಸ್ತಕ ಓದುವುದರಿಂದ ತಲತಲಾಂತರ ದಿಂದ ಗಳಿಸಿದ ಜ್ಞಾನವನ್ನು ನಮ್ಮದಾಗಿಸಿಕೊಳ್ಳಬಹುದು. **ಪುಸ್ತಕಗಳು ಒಳ್ಳೆಯ ಗೆಳೆಯನಿದ್ದಂತೆ ಹಾಗೂ ಗುರುವಿದ್ದಂತೆ**. ಓದುವ ಹವ್ಯಾಸವುಳ್ಳವರಿಗೆ ಪುಸ್ತಕಗಳೇ ಜೀವನ ಸಂಗಾತಿ.

**ವಿಷಯ ನಿರೂಪಣೆ :-**

ಮಾನವನ ಜೀವನದಲ್ಲಿ ಪುಸ್ತಕಗಳು ಪ್ರಮುಖ ಪಾತ್ರ ವಹಿಸುತ್ತವೆ. ಜ್ಞಾನಾಭಿವೃದ್ಧಿಗೆ ಮತ್ತು ಅಮೂಲ್ಯವಾದ ಸಮಯ ಸದುಪಯೋಗಕ್ಕೆ ಗ್ರಂಥಾಲಯಗಳು ಬಹಳ ಮುಖ್ಯ ಎನಿಸುತ್ತವೆ. ಗ್ರಂಥಾಲಯವು ಪೀಳಿಗೆಯಿಂದ ಪೀಳಿಗೆಗೆ ಜ್ಞಾನವನ್ನು ಹಂಚುವ ಉನ್ನತ ಕಾರ್ಯವನ್ನು ಮಾಡುತ್ತಿದೆ. ಪುಸ್ತಕ ಓದುವುದು ಗ್ರಂಥ ಸಂಗ್ರಹ ಮಾಡುವುದು ಅತ್ಯುತ್ತಮ ಹವ್ಯಾಸಗಳಲ್ಲಿ ಒಂದು ಸ್ವಂತವಾಗಿ ಗ್ರಂಥಗಳನ್ನು ಖರೀದಿಸಿ ಸಂಗ್ರಹಿಸುವುದು ಮುಂದಿನ ಜನಾಂಗಕ್ಕೆ ನಾವು ನೀಡುವ ಸಣ್ಣ ಕಾಣಿಕೆ. ಗ್ರಂಥ ಗಳನ್ನು ಸಂಗ್ರಹಿಸಿ ಬಳಸುವುದು ಒಂದು ಕಲೆ.



ಸಾರ್ವಜನಿಕ ಗ್ರಂಥಾಲಯಗಳು ಹಿರಿ– ಕಿರಿಯರು, ಗುರು–ಶಿಷ್ಯರು, ಹವ್ಯಾಸವುಳ್ಳವರು ಅದ್ಯಯನ ಶೀಲರು ಎಲರ್ಲಿಗೂ ಬಳಕೆಯಾಗುವ ಗ್ರಂಥಗಳನ್ನು ಹೊಂದಿರಬೇಕು. ಓದುವ ಕೊಠಡಿ, ಎರವಲು ಪಡೆಯುವ ಅವಕಾಶಗಳಲ್ಲದೆ, ಕಾಲಕಾಲಕ್ಕೆ ತನ್ನ ಸೇವೆಯನ್ನು ಗ್ರಂಥಾಲಯಗಳು ವಿಸ್ತರಿಸುತ್ತಲೂ ಇರಬೇಕು ಗ್ರಂಥಗಳ ಸದುಪಯೋಗಗಳನ್ನು ಮನಗಂಡ ಸರ್ಕಾರ ಪ್ರಾಥಮಿಕ ಶಾಲಾ ಹಂತದಿಂದ ಹಿಡಿದು ಹೊಸ ಅಕ್ಷರಸ್ತ ಹಿರಿಯರಿಗೂ ಗ್ರಂಥಾಲಯಗಳನ್ನು ತೆರೆದಿದೆ. ಪ್ರತೀ ಗ್ರಾಮ ಪಂಚಾಯತಿಗೂ ಗ್ರಂಥಾಲಯಗಳು ತೆರೆಯಲ್ಪಟ್ಟಿವೆ. ನಗರ ಪ್ರದೇಶಗಳಲ್ಲಿ ಗ್ರಂಥಾಲಯಗಳ ಉಪಯೋಗ ವಿಸ್ತಾರವಾಗಿ ಜಾರಿಯಾಗಿದೆ ಜ್ಞಾನ ಪ್ರಸಾರ ಎಡೆಬಿಡದೆ ಸಾಗಿದೆ.

**ಉಪ ಸಂಹಾರ:**

ಓದುವ ಹವ್ಯಾಸ ರೂಡಿಸಿಕೊಳ್ಳುವುದು ಒಂದು ಸಾಧನೆ ಒಮ್ಮೆ ರೂಡಿಸಿಕೊಂಡ ಹವ್ಯಾಸವನ್ನು ಗ್ರಂಥಾಲಯದ ಬಳಕೆಯಿಂದ ಮುಂದುವರೆಸಿ ಜ್ಞಾನಾಭಿವೃದ್ಧಿಗೆ ತೊಡಗೂಗಿಸಿಕೊಳ್ಳಬಹುದು. ಅಲ್ಲದೇ ಗ್ರಂಥಾಲಯಗಳನ್ನು ಸದುಪಯೋಗಪಡಿಸಿಕೊಳ್ಳುವಂತೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಬೇಕು. ಅಲ್ಲದೇ ಗ್ರಂಥಾಲಯವನ್ನು ಸಂರಕ್ಷಿಸಬೇಕಾದುದು ನಮ್ಮ ಕರ್ತವ್ಯವೂ ಆಗಿದೆ. ಬನ್ನಿ ನಾವೆಲ್ಲರೂ ಗ್ರಂಥಾಲಯದ ಸದ್ಬಳಕೆ ಮಾಡಿಕೊಳ್ಳೋಣ.